



(ಮಂಡ್ಯ ತಾಲ್ಲೂಕಿನ ಬಿ. ಹಟ್ನಿಯ ನಿವಾಸಿಗಳಾಗಿರುವ ಲೇಖಕರು ಸರ್ಪಭೂಷಣ ಶಿವಯೋಗಿಗಳ ಒಂದು ರಚನೆಯನ್ನು ವ್ಯಾಖ್ಯಾನಿಸಿ, ಸಂಕ್ಷಿಪ್ತವಾಗಿ ಈ ಸಂತರ ಜೀವನವನ್ನು ಪರಿಚಯಿಸಿದ್ದಾರೆ.)

**ಅ**ಧ್ಯಾತ್ಮ, ವೇದಾಂತ, ತತ್ವಶಾಸ್ತ್ರ, ಪರಾವಿದ್ಯೆ, ಬ್ರಹ್ಮಜ್ಞಾನ ಇವೆಲ್ಲ ಸಾಮಾನ್ಯ ದೃಷ್ಟಿಗೆ ಅಗೋಚರವಾದ ನಿತ್ಯಸತ್ಯವನ್ನು ವಿವರಿಸುವ ವಿದ್ಯೆಯ ಪರ್ಯಾಯ ಪದಗಳು. ಈ ವಿದ್ಯೆಯನ್ನು ಅಭ್ಯಾಸ ಮಾಡುವವರನ್ನು ಸಾಧಕರು, ಮೋಕ್ಷಾರ್ಥಿಗಳು ಎಂದು ಕರೆಯುತ್ತಾರೆ. ಈ ವಿದ್ಯೆಯು ಅನುಭವದಲ್ಲಿ ಪರ್ಯವಸಾನಗೊಂಡಾಗ ಇವರನ್ನು ಮುಕ್ತಾತ್ಮರು ಎಂದು ಜನ ಕರೆಯುತ್ತಾರೆ. ಅಂದರೆ, ಇಂತಹವರು ಜನನ ಮರಣಗಳೆಂಬ ಭವಚಕ್ರದಿಂದ ಬಿಡುಗಡೆಯಾದವರು. ಇವರ ಅದ್ಭುತ ಜೀವನಗಳನ್ನು ಆಧರಿಸಿಯೇ ಎಲ್ಲ ಧರ್ಮಗಳೂ ಬೆಳೆದಿವೆ. ಈ ವರ್ಗದ ಸಂತರು ಎಲ್ಲ ಕಾಲದಲ್ಲಿಯೂ ಇರುತ್ತಾರೆ. ಇವರಿಗೆ ಜಾತಿ ಕುಲ ಗೋತ್ರಗಳಿಲ್ಲ, ಲಿಂಗಭೇದವಿಲ್ಲ. ಅವರು ಹುಟ್ಟಿನಿಂದ ಹಿಂದೂ, ಜೈನ, ಬೌದ್ಧ, ಮಹಮ್ಮದೀಯ ಅಥವಾ ಕ್ರೈಸ್ತಮತಕ್ಕೆ ಸೇರಿದವರಾಗಿರಬಹುದು. ಅಥವಾ ಭಾರತದಲ್ಲಿಯಾದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಗಗಳಲ್ಲಿ ಅಥವಾ ದಿಗ್ಭ್ರಮೆಗೊಳಿಸುವ ಸಾವಿರಾರು ಪಂಗಡಗಳೊಂದರಲ್ಲಿ ಜನಿಸಿರಬಹುದು. ಬಾಲ್ಯದಲ್ಲಿ ಅವರ ಸಂಬಂಧಿಕರು ಅವರನ್ನು ಒಂದು ವರ್ಗಕ್ಕೆ ಕಟ್ಟಿಹಾಕಲು ಪ್ರಯತ್ನಿಸುತ್ತಾರೆ. ಆದರೆ ಇವರು ಜಗತ್ತಿನಲ್ಲಿರುವ ಪ್ರತ್ಯೇಕಗೊಳಿಸುವಂಥ ಬಂಧನಗಳನ್ನು ಕಳಚಿಕೊಂಡು, ಪಂಚಭೂತಗಳನ್ನು ಮೆಟ್ಟಿ ನಿಂತ ಮಹಾಂತರಾಗುತ್ತಾರೆ.

೧೯ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಬೆಂಗಳೂರಿನ ಕೆರೆ ನಂಜುಂಡಯ್ಯನ ಮಠದ ಸಪ್ಪಣ್ಣಾರ್ಯರು (ಸರ್ಪಭೂಷಣ ಶಿವಯೋಗಿ) ಮೇಲಿನ ವರ್ಗಕ್ಕೆ ಸೇರಿದ ಮಹಾತಪಸ್ವಿಗಳು. ಬೆಂಗಳೂರಿನ ಬಳಿಯಲ್ಲಿರುವ ಬಾಣಾವರದ ಶ್ರೀ ಮಲ್ಲಿಕಾರ್ಜುನಪ್ಪ ಮತ್ತು ಚೆನ್ನಮ್ಮ ಎಂಬ ದಂಪತಿಗಳ ಕಡೆಯ ಶಿಶುವೇ ಸಪ್ಪಣ್ಣ. ಮಲ್ಲಿಕಾರ್ಜುನಪ್ಪನವರ ಜೀವನವೃತ್ತಿ



ವ್ಯಾಪಾರ. ಆ ಚಿಕ್ಕ ಹಳ್ಳಿಯಲ್ಲಿ ವ್ಯಾಪಾರ ಸರಿಯಾಗಿ ನಡೆಯದೆ, ಜೀವನೋಪಾಯಕ್ಕಾಗಿ ಅವರು ಬೆಂಗಳೂರಿಗೆ ವಲಸೆ ಬಂದರು. ಬೆಂಗಳೂರಿನ ತಿಪ್ಪಶೆಟ್ಟರ ಮಠದ ಪೀಠಾಧಿಪತಿಗಳಾದ ಶ್ರೀಗುರುಸಿದ್ಧ ಸ್ವಾಮಿಗಳ ಅನುಯಾಯಿಗಳಾಗಿ ನೆಲೆಸಿದರು. ಮಠದ ಅಂಗಳದ ಜಗಲಿಯ ಮೇಲೆ ಕುಳಿತಿದ್ದ ಬಾಲಕನ ತಲೆಯ ಹಿಂದೆ ಸರ್ಪವು ಹೆಡೆ ಬಿಚ್ಚಿ ನಿಂತಿದ್ದನ್ನು ಕಂಡು ಗುರುಗಳು ಇವರನ್ನು ಸರ್ಪಭೂಷಣ ಎಂದೇ ಕರೆದರು. ತಮ್ಮ ಇಪ್ಪತ್ತೆರಡನೆಯ ವಯಸ್ಸಿನಲ್ಲಿ ಸರ್ಪಭೂಷಣರು ತಂದೆ ತಾಯಿಯರ ಅನುಮತಿಯನ್ನು ಪಡೆದು ಸಂನ್ಯಾಸದೀಕ್ಷೆಯನ್ನು ಸ್ವೀಕರಿಸಿದರು. ಕರ್ನಾಟಕದ ಉದ್ದಗಲವನ್ನೂ ಸಂಚರಿಸಿ ತಮ್ಮ ವಿದ್ವತ್ತು ಹಾಗೂ ಶಾಂತ, ಸರಳ ಸ್ವಭಾವಗಳಿಂದ ಪ್ರಸಿದ್ಧರೂ, ಜನಪ್ರಿಯರೂ ಆದರು. ನಿಜಗುಣರ 'ಕೈವಲ್ಯ ಪದ್ಧತಿ'ಯ ಅನುಸಂಧಾನದಿಂದ ಇವರ ಸಾಧನೆ ಅವ್ಯಾಹತವಾಗಿ ನಡೆದು ಅನುಭಾವಿಗಳಾದರು. ಇವರು ಅನೇಕ ಪದಗಳನ್ನು ರಚಿಸಿದ್ದಾರೆ. ಕೂಡಲ ಸಂಗಮದಲ್ಲಿದ್ದಾಗ 'ವೇದಾಂತ ಶಿಖಾರತ್ನ ಪ್ರಕಾಶಿಕೆ' ಎಂಬ ವಚನಗ್ರಂಥವನ್ನು ಬರೆದರು. 'ಜ್ಞಾನಶತಕ' ವೆಂಬ ಕೃತಿಯೂ ಇವರದೇ. ೧೮೭೪ರಲ್ಲಿ ಇವರ ಭೌತಿಕ ದೇಹ ಮರೆಯಾಯಿತು. ಅವರ ಸಮಾಧಿ ಮಠದಲ್ಲಿಯೇ ಆಯಿತು. ಶ್ರೀಗಳು ಜೀವಿಸಿದ್ದುದು ಕೇವಲ ೪೪ ವರ್ಷಗಳು ಮಾತ್ರ.

ಆದರೆ ಇವರು ಜಗತ್ತಿಗೆ ಕೊಟ್ಟ ವೇದಾಂತರಾಶಿ ನಾಲ್ಕು ಯುಗಗಳಿಗೂ ಆಗಿ ಮಿಗುತ್ತದೆ. ಇವರು ಬರೆದಿರುವ 'ಕೈವಲ್ಯ ಕಲ್ಪವಲ್ಲರಿ' ಆಧ್ಯಾತ್ಮಿಕ ಪಿಪಾಸುಗಳ ಪಾಲಿನ ಒಂದು ಅಮೂಲ್ಯ ಕೃತಿರತ್ನವಾಗಿದ್ದು, ಸಾಧಕರ ಹೃನ್ಮನಗಳಲ್ಲಿ ಸದಾ ರಂಜಿಸುತ್ತಿದೆ. ಈ ರಚನೆಯಲ್ಲಿ ಶ್ರೀಗಳು ಲೋಕದ ಜನರನ್ನು ಮೂರು ಬಗೆಯಾಗಿ ವಿಂಗಡಿಸಿದ್ದಾರೆ :

ಶರೀರವಿಡಿದ ಸರ್ವಪುರುಷರುಗಳು ಮೂರು
ತೆರದಿ ವರ್ತಿಪರಿಂತಿದನು ಪೇಳ್ವೆ ॥ ಪಲ್ಲವಿ ॥

ನೆರೆ ಪಾಪ ಪುಣ್ಯಾದಿಗಳನರಿಯದೆ ನಿಜೋ-
ದರ ಪೋಷಣವನೆ ಬಲ್ಲವನಾಗಿ
ಮರ ಹುಟ್ಟಿ ಮರ ಬೀಳ್ವ ತೆರದಿ ಸಾಯುವ ಮೂಢ
ನರನೆ ಕನಿಷ್ಠನೆಂದೆನಿಪನು ॥ ೧ ॥

ಧರೆಯೊಳು ಮಾಡಿದ ಬಹು ಪುಣ್ಯಫಲದಿಂದೆ
ಪರಲೋಕವಹುದೆನ್ನುತೆಳಸುತೆ
ಪರಿಪರಿ ವಿಧದಿ ದೇಹವ ದಂಡಿಸುವ ಕರ್ಮ
ಪರನೆ ಮಧ್ಯಮನೆಂದೆನಿಸುವನು ॥ ೨ ॥

ಪರಮಾನುಭವದಿಂದೆ ಗುರುಸಿದ್ಧನಾದೆನೆಂ
ಬರಿವರಿತಿಹಪರವೆಂಬುದ
ಮರೆದು ಮುಂಪೇಳ್ದನಂತುಭಯಕಲ್ಪನೆಯಳಿ
ದಿರುವನುತ್ತಮವೆನಿಸುವನು ॥ ೩ ॥

ಯತಿವರೇಣ್ಯರು ತಮ್ಮ ಮೊದಲನೆಯ ಪದ್ಯದಲ್ಲಿ ಬಹಳ ಕೆಳಮಟ್ಟದ ಜನರ ಸ್ವಭಾವವನ್ನು ತಿಳಿಸುತ್ತಾ ಈ ಜನ ತಮ್ಮ ಹೊಟ್ಟೆಪಾಡಿಗಾಗಿ ಬದುಕಿರುವವರು ಎಂದು ಉದಾಹರಣೆ ನೀಡುತ್ತಾರೆ: ಇಂಥವರು ಎತ್ತು, ಎಮ್ಮೆಗಳು ಹಸಿಯ ಹುಲ್ಲಿಗೆ ಹಾತೊರೆಯುವಂತೆ ತಮ್ಮ ದಿನನಿತ್ಯದ ಹೊಟ್ಟೆ ಹೊರೆದುಕೊಂಡು ಜೀವಿಸುವರು. ಇದಕ್ಕಿಂತ ಮಿಗಿಲಾದುದನ್ನು ಅವರು ಯೋಚಿಸುವುದಿಲ್ಲ. ಕಾಡಿನಲ್ಲಿ ಹುಟ್ಟಿ ಬೆಳೆದು ಕಾಲಾನಂತರದಲ್ಲಿ ಒಣಗಿ ಬಿದ್ದು ಹೋಗುವ ಮರದಂತೆ ಇವರ ಜೀವನ. ಕಾಡಿನ ಮರಗಳಿಗೂ ಇವರಿಗೂ ಏನೂ ವ್ಯತ್ಯಾಸವಿಲ್ಲ ಎಂದಿದ್ದಾರೆ.

ತಮ್ಮ ಎರಡನೆಯ ಪದ್ಯದಲ್ಲಿ ಲೋಕದಲ್ಲಿ ಕೆಲವರು ಧರ್ಮ-ಕರ್ಮ, ಪಾಪ-ಪುಣ್ಯಗಳಿಗೆ ಅಂಜಿ ಇಹದಲ್ಲಿ ಒಳ್ಳೆಯದಾಗಿ ನಡೆದುಕೊಂಡರೆ, ಪರದಲ್ಲಿ ಸತ್ತನಂತರ ತಮಗೆ ಸದ್ಗತಿ ದೊರೆಯುತ್ತದೆ ಎಂದು ತಿಳಿದು ಅನೇಕ ತರಹದ ಜಪ, ತಪ, ಧ್ಯಾನ, ಭಜನೆ, ಸಂಧ್ಯಾವಂದನೆ, ಸತ್ಸಂಗಗಳಲ್ಲಿ ಭಾಗಿಗಳಾಗಿ ಕಾಲ ಕಳೆಯುತ್ತಿರುತ್ತಾರೆ. ಇವರು ಮೊದಲನೆಯ ವರ್ಗದ ಜನರಿಗಿಂತ ಉತ್ತಮರು ಎಂದಿದ್ದಾರೆ. ಯೋಗ ಮತ್ತು ಭೋಗ ಎರಡನ್ನೂ ಇವರು ಏಕಕಾಲದಲ್ಲಿ ಅನುಭವಿಸುತ್ತಾರೆ. ಪಾಪದ ಭಯದಿಂದಲಾದರೂ ಇವರು ಸ್ವಾರ್ಥವನ್ನು ಗೆಲ್ಲುತ್ತಾರೆ, ದಾನಧರ್ಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.

ಮೂರನೆಯ ವರ್ಗದ ಜನರಲ್ಲಿ ಕೆಲವರು ತಮ್ಮ ಜ್ಞಾನವೇ ಶ್ರೇಷ್ಠವೆಂದು ತಿಳಿದು, ಈ ಜಗತ್ತಿನಲ್ಲಿ ನಾವು ಎಲ್ಲವನ್ನೂ ಬಲ್ಲೆವು, ನಾವೇ ಸರ್ವಜ್ಞರು, ನಾವು ತಿಳಿದುಕೊಳ್ಳಬೇಕಾಗಿರುವುದು ಮತ್ತಾವುದೂ ಉಳಿದಿಲ್ಲ; ಪರವೂ ಇಲ್ಲ, ಪರಮಾರ್ಥವೂ ಇಲ್ಲ ಎಂಬ ಅಹಂಭಾವ ಹೊಂದಿರುತ್ತಾರೆ. ಇವರೂ ಸಹ ನಿಜವಾದ ಜ್ಞಾನಿಗಳಲ್ಲ.

ಮಾನವಶಕ್ತಿಗಿಂತ ಮಿಗಿಲಾದ ಒಂದು ಅಗೋಚರ ಶಕ್ತಿ ಈ ಬ್ರಹ್ಮಾಂಡದಲ್ಲಿದೆ, ಆ ಶಕ್ತಿಯನ್ನು ನಮ್ಮ ಪೂರ್ವಜರು 'ದೇವರು' ಎಂದು ಕರೆದಿದ್ದಾರೆ. ನಾವೆಲ್ಲಾ ಆ ದೇವರ ಕೈಯಲ್ಲಿನ ಉಪಕರಣಗಳು. ಈ ಭೂಗ್ರಹದ ಮೇಲಿನ ವಾಸಕ್ಕಿಂತಲೂ ಮಿಗಿಲಾದ ಒಂದು ಉತ್ತಮ ವ್ಯವಸ್ಥೆ ದೇವರ ಸೃಷ್ಟಿಯಲ್ಲಿದೆ. ಎಲ್ಲಕ್ಕೂ ಭಗವಂತನ ಅನುಗ್ರಹ ಆಶೀರ್ವಾದ ಬೇಕು ಎಂದು ತಿಳಿದುಕೊಂಡು ಸದಾ ದೇವರ ಸ್ಮರಣೆಯಲ್ಲಿರುವವರು ಬಹಳ ಉತ್ತಮರು ಎಂದು ತಿಳಿಯಪಡಿಸಿದ್ದಾರೆ.

ಕಾವ್ಯಪ್ರಭ

## ಸರದಿ ಬಂದಾಗ

ಆತ ಸುಳಿವಿತ್ತು ಬರುವವನಲ್ಲ
ರೋಗ ಬಂದೊಡನೆ ಸಾಯಬೇಕೆಂದಿಲ್ಲ.
ಭವರೋಗವೈದ್ಯನಿಗೆ ಬಿಡುವೆಂಬುದಿಲ್ಲ—
ಎತ್ತ, ಎಂತು ಬಂದು ತೆರಳುವನೊ ತಿಳಿದವರಿಲ್ಲ.
ತಡೆಹಿಡಿದು ನಿಲ್ಲಿಸುವ ಶಕ್ತಿ ಯಾರಿಗೂ ಇಲ್ಲ
ಗಂಡನನು ಉಳಿಸಿಕೊಳ್ಳುವ ಸತಿ ಸಾವಿತ್ರಿ ಈಗಿಲ್ಲ.
ಕರ್ತವ್ಯನಿಷ್ಠೆ ಅವನಿಗಿರಲು ಮೆಚ್ಚುವವರಿಲ್ಲ
ಸತ್ತವನ ಸತಿ-ಸುತ-ಬಂಧು-ಮಿತ್ರರ ದೂಷಣೆಗೆ ಹೊರತಲ್ಲ.
ಅವನ ಕರೆದು ಮಣೆ ಹಾಕಿ ಸಂತಸದಿ ಸ್ವಾಗತಿಸುವವರಿಲ್ಲ.
ಪದಕ ಪ್ರಶಸ್ತಿಗಳ ನೀಡುವ ಸಂಘ ಸಂಸ್ಥೆಗಳಿಲ್ಲ.
ನಯವಿಲ್ಲ, ನಾಜೂಕಿಲ್ಲ, ಸದ್ದುಗದ್ದಲವಿಲ್ಲ ಅವನ ಬಳಿ—
ದೊರೆಗೆ ಹಿರಿತನವಿಲ್ಲ, ದಾಸನಿಗೆ ಅನುಕಂಪವಿಲ್ಲ,
ಸಾಲಿನಲಿ ನಿಂತ ಪ್ರಥಮನಿಗೆ ಆದ್ಯತೆಯಿಲ್ಲ,
ಕೊನೆಯಲ್ಲಿ ನಿಂತವನು ಬಹಳ ಕಾಯಬೇಕೆಂದಿಲ್ಲ.
ಗುಂಪಿನಲ್ಲಿರಲಿ, ತಲೆ ಮರೆಸಿ, ಗುರುತು ಸಿಗದಂತಿರಲಿ,
ಸೈನ್ಯ ಸುತ್ತು ಕಾಯುತಲಿರಲಿ, ಗರ್ಭಗುಡಿಯಲೇ ಅಡಗಿರಲಿ
ಗಡುವು ಮುಗಿದೊಡನೆ ನಡುಬಿದ್ದು ಹೋಗುವನು
ಒಬ್ಬೊಬ್ಬನನೆ ಕೊಂಡೊಯ್ಯಬೇಕೆಂದಿಲ್ಲ.
ಒಲ್ಲೆ ಎಂದವರುಂಟೆ? ನಮ್ಮ ಸಮ್ಮತಿ ಸಿದ್ಧತೆಗೆ ಕ್ಷಣಕಾಲ
ಕಾಯುವವರಾರು? ಕಾಲರಾಯನ ಸಮಯ ಸೂಚಿ
ಮೀರಲುಂಟೆ? ಕಾಲಾಂತಕಾಯ ತಸ್ಮೈ ನಮಃ.

—ಡಿ. ನಂ. ವೆಂಕಟರಮಣಯ್ಯ, ಬೆಂಗಳೂರು